ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 :** **ದಿನಾಂಕ: 11–12–2014**

**ಪತ್ರಿಕಾ ಆಮಂತ್ರಣ**

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಕರ್ನಾಟಕ ರಾಜ್ಯ ಶಿಶು ಕಲ್ಯಾಣ ಸಂಸ್ಥೆ ವತಿಯಿಂದ ಶಾಲೆಯಲ್ಲಿ ಓದುತ್ತಿರುವ ವಿಕಲ ಚೇತನ ಮಕ್ಕಳಿಗೆ ಬಾಲ ಉತ್ಸವ | 12–12–2014 ಶುಕ್ರವಾರ ಬೆಳಗ್ಗೆ 10–00 ಗಂಟೆಗೆ | ಇಂಡಿಯನ್ ಸೋಷಿಯಲ್ ಇನ್ಸ್‌ಟಿಟ್ಯೂಟ್ ಆವರಣ, ಬೆನ್ಸನ್‌ಟೌನ್, ಬೆಂಗಳೂರು |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

## ವಾಹನಗಳ ತಪಾಸಣೆ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)**

ರಹದಾರಿ ನಿಬಂಧನೆ ಉಲ್ಲಂಘಿಸಿ ಸಂಚರಿಸುವ, ರಹದಾರಿ ಇಲ್ಲದೇ ಅನಧಿಕೃತವಾಗಿ ಪ್ರಯಾಣಿಕರನ್ನು ಸಾಗಿಸುವ ಖಾಸಗಿ ಬಸ್‌ಗಳ ಸಂಚಾರವನ್ನು, ನಿಯಂತ್ರಿಸಲು ಸಾರಿಗೆ ಇಲಾಖೆಯಿಂದ ರಾಜ್ಯಾದ್ಯಂತ ನಿರಂತರವಾಗಿ ತಪಾಸಣಾ ಕಾರ್ಯ ನಡೆಸುತ್ತಿದ್ದು ಪ್ರಸ್ತುತ ಸಾಲಿನ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 16.07 ಲಕ್ಷ ವಾಹನಗಳ ತಪಾಸಣೆ ಮಾಡಲಾಗಿದ್ದು ಅದರಲ್ಲಿ 1.54 ಲಕ್ಷ ಪ್ರಕರಣಗಳನ್ನು ದಾಖಲಿಸಲಾಗಿದೆ. 7,666 ವಾಹನಗಳನ್ನು ವಶಪಡಿಸಿಕೊಂಡಿದೆ. 62.93 ಕೋಟಿ ರೂ. ತೆರಿಗೆ ವಸೂಲಿ ಮಾಡಿದೆ. ದಂಡ ರೂಪದಲ್ಲಿ 22.91 ಕೋಟಿ ರೂ. ದಂಡ ವಸೂಲಿ ಮಾಡಲಾಗಿದೆ. ಒಟ್ಟಾರೆ 85.84 ಕೋಟಿ ರೂ. ಸಾರಿಗೆ ಇಲಾಖೆಯಿಂದ ವಸೂಲಾತಿ ಆಗಿದೆ.

ಸಾರಿಗೆ ಇಲಾಖೆ ವತಿಯಿಂದ ಖಾಸಗಿ ವಾಹನಗಳ ಕಾನೂನು ಬಾಹಿರ ಆಚರಣೆಯನ್ನು ನಿಯಂತ್ರಿಸಲು ನಿರಂತರ ತಪಾಸಣಾ ಕಾರ್ಯ ನಡೆಸಲಾಗುತ್ತಿದೆ ಎಂದು ಸಾರಿಗೆ ಇಲಾಖೆ ಸ್ಪಷ್ಟೀಕರಣ ನೀಡಿದೆ.

ಸಮ:ಬಾಬು:ಜಿಪಿಆರ್.

## ವಿಜಯ ದಿವಸ್ ಆಚರಣೆ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)**

1971 ರಲ್ಲಿ ನಡೆದ ಇಂಡೋ-ಪಾಕ್ ಯುದ್ಧದಲ್ಲಿ ಜಯವನ್ನು ತಂದು ಕೊಡಲು ದೇಶಕ್ಕಾಗಿ ಪ್ರಾಣತೆತ್ತ ವೀರ ಯೋಧರ/ಹುತಾತ್ಮರ ಸ್ಮರಣೆಯ ಸಂಕೇತವಾಗಿ ವಿಜಯ ದಿವಸ್ ಆಚರಣೆಯನ್ನು ದಿನಾಂಕ 16 ಡಿಸೆಂಬರ್ 2014 (ಮಂಗಳವಾರ) ರಂದು ಪೂರ್ವಾಹ್ನ 9.15 ಕ್ಕೆ ಗಂಟೆಗೆ ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಸ್ಮಾರಕ, ಶ್ರೀಮತಿ ಇಂದಿರಾಗಾಂಧಿ ಸಂಗೀತ ಕಾರಂಜಿ ಉದ್ಯಾನವನದ ಹತ್ತಿರ, ಚೌಡಯ್ಯ ರಸ್ತೆ, ನೆಹರು ತಾರಾಲಯದ ಎದುರು, ರಾಜ ಭವನದ ಹತ್ತಿರ, ಬೆಂಗಳೂರು – 560 01, ರಲ್ಲಿ ಏರ್ಪಡಿಸಲಾಗಿದೆ.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿಯವರು ಮತ್ತು ಗೌರವ ಅತಿಥಿಯಾಗಿ ಗೃಹ ಸಚಿವರು ಆಗಮಿಸಲಿರುವರು. ಇದಲ್ಲದೇ, ಈ ಸಮಾರಂಭದಲ್ಲಿ ಸೇವಾ ನಿರತ/ನಿವೃತ್ತ ಹಿರಿಯ ಸೇನಾಧಿಕಾರಿಗಳು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕ ಸೇವೆಯ ಅಧಿಕಾರಿಗಳು, ಎನ್‌ಸಿಸಿ ಕೆಡೆಟ್ ಸಹ ಆಗಮಿಸುವವರು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

# VIJAY DIWAS

Bengaluru, December 11 (Karnataka Information)

In order to pay homage to the brave and valiant soldiers who laid down their lives during 1971 war, Vijay Diwas Commemoration – 2014 will be hold on 16th December 2014 (Tuesday) at 9.15 AM at the National Military Memorial, adjacent to Smt. Indira Gandhi Musical Fountain on Chowdiah Road, Opp. Nehru Planetarium, Near Raj Bhavan, Bengaluru – 560 001. Hon'ble Chief Minister will be the Chief Guest and Hon'ble Home Minister will guest of hounour in the function.

Other Ministers, Civil and Military Serving Officers, retired Defence Officers, a large number of Ex-servicemen and their families, NCC Cadets, school children and Serving Soldiers will be participating in the function, says a press release by Director, Department of Sainik Welfare and Resettlement.

sm/babu/gpr.

# ಅರ್ಜಿ ಆಹ್ವಾನ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)**

ಪದವಿಪೂರ್ವ ಶಿಕ್ಷಣ ನಿಯಮಗಳ 2006 ರ ನಿಯಮ 4 ರನ್ವಯ 2015-16ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಬೆಂಗಳೂರು ದಕ್ಷಿಣ ಹಾಗೂ ಉತ್ತರ ಜಿಲ್ಲೆ ವ್ಯಾಪ್ತಿಯಲ್ಲಿ ಹೊಸದಾಗಿ ಖಾಸಗಿ

ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಅರ್ಹ ಖಾಸಗಿ ಶಿಕ್ಷಣ ಸೊಸೈಟಿಗಳು/ಟ್ರಸ್ಟ್‌ಗಳಿಗೆ ನಿಯಮನ್ವಯ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ದಿನಾಂಕ 12-12-23014 ರ ನಂತರ ಹಾಗೂ ದಿನಾಂಕ 22-12-2014 ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಲು ಜಂಟಿ ನಿರ್ದೇಶಕರು (ಮಾನ್ಯತೆ ಮತ್ತು ಅನುದಾನ), ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಇವರಿಗೆ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳನ್ನು ಇಲಾಖೆಯು ವೆಬ್‌ಸೈಟ್ www.pue.kar.nic.in ಇಲ್ಲಿಂದ ಹಾಗೂ ಯಾವುದೇ ಸ್ಪಷ್ಟೀಕರಣ ಬೇಕಾದಲ್ಲಿ ಜಿಲ್ಲಾ ಉಪ ನಿರ್ದೇಶಕರ ಕಚೇರಿಯಿಂದ ಪಡೆಯಬಹುದು.

ಸಮ:ಬಾಬು:ಜಿಪಿಆರ್.

# ಉದ್ಯೋಗ ಅವಕಾಶ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)**

ಮದರ್ ಡೈರಿ ಹಾಗೂ ಸಫಲ್ ಸಂಸ್ಥೆಯವರು ಬೆಂಗಳೂರು ನಗರ ವಲಯದಲ್ಲಿ ರಿಟೇಲ್ ಔಟ್‌ಲೇಟ್‌ಗಳನ್ನು ಮಾಜಿ ಸೈನಿಕರಿಂದ ನಡೆಸಲು ಇಚ್ಛಿಸಿದ್ದು ಈ ರೀತಿಯ ಸ್ವಯಂ ಉದ್ಯೋಗದಲ್ಲಿ ಆಸಕ್ತ ಇರುವ ಮಾಜಿ ಸೈನಿಕರು ತಮ್ಮ ಹೆಸರುಗಳನ್ನು ದಿನಾಂಕ 12-12-2014 ರ ಒಳಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಕಚೇರಿಯಲ್ಲಿ ನೋಂದಾಯಿಸಬೇಕು.

ಆಸಕ್ತ ಮಾಜಿ ಸೈನಿಕರುಗಳಿಗೆ ದಿನಾಂಕ 17-12-2014 ರಂದು ಮದರ್ ಡೈರಿ ಸಫಲ್ ಕೇಂದ್ರ ಸ್ಥಾನವಾದ ಸರ್ವೇ ನಂ 99, ಕೆಜಿ ನೋನೇಹಳ್ಳಿ, ಹೊಸಕೋಟೆ, ವೈಟ್‌ಫೀಲ್ಡ್ , ಬೆಂಗಳೂರಿನಲ್ಲಿ ಅಭ್ಯರ್ಥಿಗಳಿಗೆ ಹೆಚ್ಚಿನ ಮಾಹಿತಿ ಹಾಗೂ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿದ್ದು ಅದರಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

# ಸಾರಿಗೆ ಅದಾಲತ್

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)**

ಪ್ರಾದೇಶಿಕ ಸಾರಿಗೆ ಯಲಹಂಕ ಕಚೇರಿಯಲ್ಲಿ, ದಿನಾಂಕ 18-12-2014 ರಂದು ಸೋಮವಾರ ಸಂಜೆ 4-00 ಗಂಟೆಗೆ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ.

ಈ ಅದಾಲತ್‌ನಲ್ಲಿ ಇಲಾಖೆಯ ಮೇಲಾಧಿಕಾರಿಯವರು ಭಾಗವಹಿಸಿ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಿ ಈ ಕಚೇರಿಯ ಕಾರ್ಯವೈಖರಿಯ ಬಗ್ಗೆ ಹಾಗೂ ಕುಂದುಕೊರತೆಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆ ಎಂದು ಯಲಹಂಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮ:ಬಾಬು:ಜಿಪಿಆರ್.

# SARIGE ADALAT

Bengaluru, December 11 (Karnataka Information)

The Regional Transport Office, Yelahanka, Bangalore, will conduct "Sarige Adalat" on 18th December , 2014 at the office premises.

Higher Officers of the Transport Department, will attend this Sarige Adalat, Hence the General Public can submit their grievances pertaining to this region if any, in this Sarige Adalat and get redressal says a press release by RTO, Yelahanka.

sm/babu/gpr

# ಇಂಧನ ಸಚಿವರ ಸಭೆ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)**

ಇಂಧನ ಸಚಿವರು ಡಿಸೆಂಬರ್ 16 ರಂದು ಬೆಂಗಳೂರು ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಹಾಗೂ ಡಿಸೆಂಬರ್ 17 ರಂದು ಸಂಜೆ 6–00 ಗಂಟೆಗೆ, ಮಂಗಳೂರು, ಗುಲಬರ್ಗಾ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಸಕರುಗಳ ಜೊತೆ ಇಂಧನ ಇಲಾಖೆಗೆ ಸಂಬಂಧಿಸಿದ ಸಮಸ್ಯೆ/ವಿಚಾರಗಳ ಬಗ್ಗೆ ಮತ್ತು ನೂತನ ಯೋಜನೆಗಳನ್ನು ರೂಪಿಸುವ ಬಗ್ಗೆ ಚರ್ಚಿಸಲು ಬೆಳಗಾವಿ ಜಿಲ್ಲೆಯ ಸುವರ್ಣಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಸಭೆಯನ್ನು ಕರೆದಿದ್ದಾರೆ. ಈ ಸಭೆಗೆ ಸಂಬಂಧಪಟ್ಟ ಎಲ್ಲಾ ಎಸ್ಕಾಂಗಳ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಮೇಲ್ಪಟ್ಟ ಅಧಿಕಾರಿಗಳು ಹಾಜರಿರುವರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.